# ಚಾರಿತ್ರ್ಯ ನಿರ್ಮಾಣ - ಪೋಷಕರ ಪಾತ್ರ - ೨

**( ಮಕ್ಕಳು ಹುಟ್ಟುವ ಮೊದಲು ತಂದೆತಾಯಿಯರು ನಡೆದುಕೊಳ್ಳಬೇಕಾದ ರೀತಿಯ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ತಿಳಿಸಲಾಗಿದೆ.)**

ಮಗು ಹುಟ್ಟಿದ ಮೇಲೆ ಮಗುವಿನ ಮೇಲೆ ಪ್ರಭಾವ ಬೀರುವ ಸಂಗತಿಯೆಂದರೆ ಜೋಗುಳದ ಹಾಡುಗಳು. ಆದರೆ ಜೋಗುಳದ ಹಾಡುಗಳನ್ನು ಹಾಡುವ ಪದ್ಧತಿ ಈಗ ಕಣ್ಮರೆಯಾಗುತ್ತಿರುವುದು ದುರದೃಷ್ಟದ ಸಂಗತಿ. ಮಾರ್ಕಂಡೇಯ ಪುರಾಣದಲ್ಲಿ ಜೋಗುಳದ ಹಾಡುಗಳ ಮೂಲಕ ಮಗುವಿನ ಮನಸ್ಸನ್ನು ಬೆಳೆಸುವ ಕುತೂಹಲಕಾರಿ ಪ್ರಸಂಗ ಬರುತ್ತದೆ. ಮದಾಲಸಾ ಎನ್ನುವ ರಾಣಿ, ತನ್ನ ಮೊದಲ ಮಗುವನ್ನು ತೊಟ್ಟಿಲಲ್ಲಿ ತೂಗುವಾಗ, ವೇದಾಂತ ಬೋಧನೆ ಮಾಡುವ ಜೋಗುಳದ ಹಾಡುಗಳನ್ನು ಹಾಡುತ್ತಿದ್ದಳಂತೆ.

**ನಿನಗೆ ಯಾವ ಹೆಸರಿಲ್ಲ; ಪರಿಶುದ್ಧನು ನೀನು**
**ಪಂಚಭೂತಗಳೀ ಈ ದೇಹ ಅಲ್ಲವಲ್ಲ ನೀನು**
**ಏಕೆ ಅಳುವೆ ಮತ್ತೆ ಕಂದ, ಹುಟ್ಟಿದುದು ನೀನಲ್ಲವೋ**
**ಅಹಂಕಾರವೇ ರಾಜಕುವರನಾಗಿ**
**ಅನೇಕ ಕಲ್ಪನೆಗಳ ಜಾಲಂಧರದಲಿ,**
**ಹುಟ್ಟಿ ಅಳುತಿದೆ ಮಗುವೇ, ನಿನಗೆ ದುಃಖವಿಲ್ಲವೋ**

ನಂತರ, ಯುವಕನಾದ ಮೇಲೆ ಅವನು ಶಾಸ್ತ್ರಾಧ್ಯಯನದಲ್ಲಿ ತತ್ಪರನಾದನಂತೆ. ಹೀಗೆ ಬೆಳೆದವನು ವೈರಾಗ್ಯಶಾಲಿಯಾಗಿ, ಜಗತ್ತನ್ನೇ ತ್ಯಾಗಮಾಡಿದಂತೆ.

ತಾಯಿ ಮದಾಲಸಾ, ಮುಂದೆ ಹುಟ್ಟಿದ ತನ್ನಿಬ್ಬರು ಮಕ್ಕಳನ್ನೂ ಹೀಗೆಯೇ ಬೆಳೆಸಿದಳು. ಆದರೆ ಕಡೆಯ ಮಗನು, ರಾಜ್ಯವನ್ನು ಆಳಬೇಕಾದ ಶಕ್ತಿಸಾಮರ್ಥ್ಯಗಳನ್ನು, ಕ್ಷಾತ್ರಬುದ್ಧಿಯನ್ನು ಪಡೆಯಬೇಕೆಂದು ಎಣಿಸಿ, ಆ ಮಗು ತೊಟ್ಟಿಲಲ್ಲಿ ಇರುವಾಗ ಈ ರೀತಿ ಜೋಗುಳವನ್ನು ಹಾಡಿದಳು:

**ನೀನೊಬ್ಬ ಘನವಂತ ದೇಹಮನಸುಗಳಲ್ಲಿ ಶಕ್ತಿವಂತ...**

ಹೀಗೆ ಶಿಕ್ಷಣ ಪಡೆದ ನಾಲ್ಕನೆಯ ಮಗನು ಒಬ್ಬ ಆದರ್ಶ ಕರ್ಮಯೋಗಿಯಾಗಿ, ಧಾರ್ಮಿಕ ರಾಜನಾಗಿ ಹೆಸರು ಪಡೆದ.

ಮಗುವು ತೊಟ್ಟಿಲನ್ನು ಬಿಟ್ಟು, ಮನೆಯ ಒಳಗೆ ಓಡಾಡಲು ಆರಂಭಿಸಿದಾಗ, ತಾಯಿಯು ದೇವರ ಸ್ತೋತ್ರಗಳು, ಶರಣರ ವಚನಗಳು, ದಾಸರ ಪದಗಳು, ಭಗವದ್ಗೀತೆಯ ಶ್ಲೋಕಗಳು ಹಾಗೂ ದೇಶಭಕ್ತಿಯ ಗೀತೆಗಳನ್ನು ಹಾಡುವುದನ್ನು ಅಭ್ಯಾಸ ಮಾಡಿಕೊಂಡರೆ, ಅದನ್ನು ಕೇಳುವ ಆ ಮಗುವಿನಲ್ಲಿ ಒಳ್ಳೆಯ ಸಂಸ್ಕಾರ ಮೂಡುವುದರಲ್ಲಿ ಸಂಶಯವಿಲ್ಲ.

ಆಮೇಲೆ ಮಗುವು ಮಾತನಾಡಲು ಆರಂಭಿಸುತ್ತದೆ. ಆಗ ಮಗುವಿನ ವ್ಯಕ್ತಿತ್ವದ ಬೆಳವಣಿಗೆಗೆ ಪ್ರಮುಖ ಸಾಧನಗಳೆಂದರೆ ಕತೆಗಳು. ಸ್ವಾಮಿ ವಿವೇಕಾನಂದರ ತಾಯಿ ಭುವನೇಶ್ವರಿ ದೇವಿ ಈ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡಿದ್ದರು. ಆಕೆ ಹೇಳಿದ ರಾಮಾಯಣ, ಮಹಾಭಾರತ ಮತ್ತಿತರ ಆಕರಗಳ ಕತೆಗಳಿಂದಲೇ ಬಾಲಕ ನರೇಂದ್ರನಾಥನು ತನ್ನ ಮಾತೃಭೂಮಿಯಾದ ಭಾರತ ದೇಶದ ಸಂಪದ್ಭರಿತ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯ ಬಗ್ಗೆ ಅರಿತುಕೊಳ್ಳಲು ಸಾಧ್ಯವಾಯಿತು. ಅದೇ ರೀತಿ ಭುವನೇಶ್ವರಿ ದೇವಿಯು ನೈತಿಕ ಮೌಲ್ಯಗಳನ್ನೂ ನರೇಂದ್ರನಿಗೆ ಹೀಗೆ ಹೇಳಿಕೊಡುತ್ತಿದ್ದಳು:

**"ಮಗೂ, ನಿನ್ನ ಜೀವನದುದ್ದಕ್ಕೂ ನೀನು ಪರಿಶುದ್ಧನಾಗಿರು. ನಿನ್ನ ಗೌರವವನ್ನು ಯಾವತ್ತೂ ಕಾಪಾಡಿಕೋ. ಹಾಗೆಯೇ ಇತರರ ಗೌರವಕ್ಕೆ ಹಾನಿ ತರಬೇಡ. ಸದಾ ಶಾಂತನಾಗಿರು. ಆದರೆ ಸಮಯ ಬಂದಾಗ, ನಿನ್ನ ಹೃದಯವನ್ನು ಕಲ್ಲು ಮಾಡಿಕೋ."**

ಹಾಗೆಂದೇ ಮುಂದೆ ಸ್ವಾಮಿ ವಿವೇಕಾನಂದರು ಹೆಮ್ಮೆಯಿಂದ ಹೀಗೆ ನುಡಿದಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ: "ನನ್ನ ಜ್ಞಾನದ ಪ್ರಕಾಶಕ್ಕೆ ನಾನು ನನ್ನ ತಾಯಿಗೆ ಚಿರಋಣಿಯಾಗಿದ್ದೇನೆ."

ಜೋಗುಳದ ಹಾಡುಗಳು ಮತ್ತು ನೀತಿಕತೆಗಳನ್ನು ಮಗುವಿನ ಚಾರಿತ್ರ್ಯನಿರ್ಮಾಣದಲ್ಲಿ ಬಹಳ ಶಕ್ತಿಯುತವಾದ ಸಾಧನಗಳಾಗಿ ಉಪಯೋಗಿಸಬಹುದು ಎಂಬುದು ನಿರ್ವಿವಾದ. ಆದರೆ ಪೋಷಕರು ಅವುಗಳನ್ನು ಮೊದಲು ತಾವು ಕಲಿತುಕೊಂಡಿರಬೇಕು, ಅಷ್ಟೆ!

## ಮಗುವನ್ನು ಬೆಳೆಸುವಾಗ ಇಟ್ಟುಕೊಂಡಿರಬೇಕಾದ ಆದರ್ಶ ಮನೋಭಾವ

ಪ್ರತಿಯೊಂದು ಮಗುವೂ ತನ್ನದೇ ಆದ ಸಂಸ್ಕಾರಗಳಿಂದ ಜನ್ಮ ತಳೆಯುತ್ತದೆ ಎನ್ನುವ ಅಂಶವನ್ನು ನಾವು ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಬೇಕು. ಇದು ಮಗುವಿನ ಬೆಳವಣಿಗೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಆದ್ದರಿಂದ ನೀವು ಮಗುವಿಗೆ ಮಾಡಬಹುದಾದ ಒಂದೇ ಸಹಾಯವಿದೆ. ಅದೇನೆಂದರೆ, ಒಂದು ಆದರ್ಶದ ಮಾದರಿಯೊಂದನ್ನು ಮಗುವಿನ ಮುಂದಿಡುವುದು; ಮಗುವಿನ ನೈತಿಕ ಬೆಳವಣಿಗೆಗೆ ಬೇಕಾದ ವಾತಾವರಣವನ್ನು ನಿರ್ಮಾಣ ಮಾಡಿಕೊಡುವುದು. ಈ ವಿಚಾರದಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳನ್ನು ನೆನಪಿಸಿಕೊಳ್ಳಬೇಕು:

"ನೀವು ಒಂದು ಗಿಡವನ್ನು, ಅದಕ್ಕೆ ಸೂಕ್ತವಾಗದ ಮಣ್ಣಿನಲ್ಲಿ ಬೆಳೆಸಲು ಸಾಧ್ಯವಿಲ್ಲ. ಮಗುವು ತನಗೆ ತಾನೇ ಕಲಿತುಕೊಳ್ಳುವುದು. ಅದು ತನ್ನ ದಾರಿಯನ್ನು ಹಿಡಿದು ಸಾಗಲು ನೀವು ಸಹಾಯ ಮಾಡಬಹುದಷ್ಟೆ. ನೀವು ಸಕಾರಾತ್ಮಕವಾಗಿ ಏನನ್ನೂ ಮಾಡಲಾರಿರಿ, ಆದರೆ ನಕಾರಾತ್ಮಕವಾಗಿ ಸಹಾಯ ಮಾಡಬಲ್ಲಿರಿ. ಅಂದರೆ ಅಡೆತಡೆಗಳನ್ನು ನಿವಾರಣೆ ಮಾಡಬಲ್ಲಿರಿ. ಆದರೆ ಜ್ಞಾನವು

ಮಗುವಿನ ಸ್ವಭಾವದಿಂದಲೇ ಪ್ರಕಟವಾಗುವುದು. ಸ್ವಲ್ಪ ಮಣ್ಣನ್ನು ಸಡಿಲಗೊಳಿಸಿರಿ, ಆಗ ಬೀಜವು ಸುಲಭವಾಗಿ ಮೊಳಕೆಯೊಡೆಯುವುದು. ಅದರ ಸುತ್ತಲೂ ಬೇಲಿಯನ್ನು ಹಾಕಿ; ಗಿಡವನ್ನು ಯಾರೂ ನಾಶಮಾಡದಂತೆ ನೋಡಿಕೊಳ್ಳಿ. ಅಲ್ಲಿಗೆ ನಿಮ್ಮ ಕೆಲಸ ಮುಗಿಯಿತು. ನೀವು ಇನ್ನೇನನ್ನೂ ಮಾಡಲಾರಿರಿ. ಇನ್ನುಳಿದಿರುವುದು ಅದರ ಸ್ವಭಾವದಿಂದಲೇ ಅಭಿವ್ಯಕ್ತಗೊಳ್ಳುವ ಕಾರ್ಯವಷ್ಟೆ. ಹೀಗೆಯೇ ಮಗುವಿನ ವಿದ್ಯಾಭ್ಯಾಸದ ವಿಷಯದಲ್ಲಿಯೂ ಕೂಡ. ಮಗುವು ತನಗೆ ತಾನೇ ಕಲಿತುಕೊಳ್ಳುತ್ತದೆ."

**ನಿಮ್ಮ ಮಗು ಭಗವಂತನು ನಿಮಗೆ ನೀಡಿರುವ ಅತ್ಯಮೂಲ್ಯವಾದ ಕೊಡುಗೆ**. ಅದನ್ನು ಚೆನ್ನಾಗಿ ಪೋಷಿಸುವುದು ನಿಮ್ಮ ಜವಾಬ್ದಾರಿ. ಹೀಗಾಗಿ ಮಗುವಿನ ಮೇಲೆ ಒಡೆತನವನ್ನು ಸಾಧಿಸುವುದು ಮತ್ತು ಅದರಿಂದ ನಿಮ್ಮ ಪರಿಶ್ರಮಕ್ಕೆ ಪ್ರತಿಯಾಗಿ ಏನನ್ನಾದರೂ ಅಪೇಕ್ಷಿಸುವುದು ಅಸಂಬದ್ಧವೇ ಸರಿ.

ನಿಮ್ಮ ಮಗುವಿನ ಚಾರಿತ್ರ್ಯನಿರ್ಮಾಣವು ಒಮ್ಮೆಗೇ ಆಗುವ ಕೆಲಸವಲ್ಲ. ಇದು ಬಹು ದೀರ್ಘ ಕಾಲ ತೆಗೆದುಕೊಳ್ಳುತ್ತದೆ ಮತ್ತು ಹಲವು ಎಡರುತೊಡರುಗಳಿಂದ ಕೂಡಿರುತ್ತದೆ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಒಳಿತಿನ ಮಾರ್ಗವು ವಿಶ್ವದಲ್ಲಿಯೇ ಅತ್ಯಂತ ಕಠಿಣವಾದುದು ಮತ್ತು ಕಡಿದಾದುದು. ಚಾರಿತ್ರ್ಯವು ಸಾವಿರಾರು ಅನಿಷ್ಟಗಳನ್ನು ಹಾದುಕೊಂಡೇ ನಿರ್ಮಾಣವಾಗಬೇಕು." ಆದ್ದರಿಂದ ವ್ಯಕ್ತಿತ್ವನಿರ್ಮಾಣವು ಅನಂತ ಸಹನೆಯನ್ನು ಮತ್ತು ಎಡೆಬಿಡದ ದೃಢತೆಯನ್ನು ಅಪೇಕ್ಷಿಸುತ್ತದೆ. ನಿಮ್ಮ ಮಕ್ಕಳು ಹದಿಹರಯದಲ್ಲಿದ್ದರೆ, ಅವರ ಮನಸ್ಸನ್ನು ಅನುಕಂಪದಿಂದ ಅರ್ಥಮಾಡಿಕೊಂಡು ವ್ಯವಹರಿಸಬೇಕು. ಏಕೆಂದರೆ, ಅವರು ಬಾಲ್ಯದಿಂದ ಪ್ರಬುದ್ಧಾವಸ್ಥೆಯತ್ತ, ಅವಲಂಬನೆಯಿಂದ ಸ್ವಾವಲಂಬನೆಯತ್ತ ಹೋಗುತ್ತಿದ್ದಾರೆ. ಈ ಹಂತದಲ್ಲಿ ಅವರಲ್ಲಿ ಅಸಹಜ ಪ್ರವೃತ್ತಿಗಳು ಮೈದೋರುವುದು ಸಹಜ.

ಬೆಳೆಯುತ್ತಿರುವ ಮಕ್ಕಳ ಮೇಲೆ, ನಿಮ್ಮ ಮಹತ್ವಾಕಾಂಕ್ಷೆಗಳನ್ನು ಮತ್ತು ಆಯ್ಕೆಗಳನ್ನು ಹೇರುವುದು ಅವರ ಮೇಲೆ ತುಂಬ ಒತ್ತಡವನ್ನು ಉಂಟುಮಾಡುತ್ತದೆ. ಅದರಲ್ಲೂ ಓದು ಮತ್ತು ಉದ್ಯೋಗಗಳ ಆಯ್ಕೆಯ ವಿಷಯದಲ್ಲಿ ಇದು ಬಹಳ ಸತ್ಯ. ಆದ್ದರಿಂದ ಸರಿಯಾದ ಮಾರ್ಗವೆಂದರೆ, ನಿಮ್ಮ ಮಗುವಿನ ಸಹಜ ಆಸಕ್ತಿಯನ್ನು ಕಂಡುಹಿಡಿದು, ಅದನ್ನು ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಮಕ್ಕಳ ಮಿದುಳನ್ನು ನಿಮ್ಮ ಭಾವನೆಗಳು ಮತ್ತು ಅಭಿಪ್ರಾಯಗಳಿಂದ ತುಂಬುವುದು ಅವರ ಸ್ವಂತಿಕೆಯನ್ನು ಹಾಳುಮಾಡಿದಂತೆಯೇ ಸರಿ.

## ಚಾರಿತ್ರ್ಯನಿರ್ಮಾಣದಲ್ಲಿ ನಿಮ್ಮ ಪಾತ್ರ

ಮಗು ತನ್ನ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಯಾವ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂಬುದರ ಬಗ್ಗೆ ನಿಮಗೆ ಸ್ಪಷ್ಟ ಅರಿವು ಇರಬೇಕು. ಇಲ್ಲದಿದ್ದರೆ, ಗುಣಗಳನ್ನು ಅಭ್ಯಾಸ ಮಾಡುವ ಕ್ರಿಯೆಯು ಅಸ್ತವ್ಯಸ್ತವಾಗಿ ಹೋಗಿ, ಪರಿಣಾಮಕಾರಿಯಾಗಿರುವುದಿಲ್ಲ. ಇದರಿಂದಾಗಿ ಮಗುವು ಸಂದೇಹಕ್ಕೆ ಒಳಗಾಗುತ್ತದೆ ಮತ್ತು ಹತಾಶಸ್ಥಿತಿಯನ್ನು ತಲುಪುತ್ತದೆ. ಆದ್ದರಿಂದ ಜೀವನದ ಕೆಲವು ಮೂಲಭೂತ ತತ್ತ್ವಗಳನ್ನು ಆಯ್ಕೆ ಮಾಡಿ, ಅವುಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಒಳ್ಳೆಯದು. ಅವು ಯಾವುವೆಂದರೆ, **ಆರೋಗ್ಯ, ಶಿಕ್ಷಣ** ಮತ್ತು **ನೈತಿಕತೆ**. ಇವುಗಳ ವಿಷಯದಲ್ಲಿ ನಾವು ಎಚ್ಚರದಿಂದ ಇರಬೇಕು. ಉಳಿದ ಸಣ್ಣಪುಟ್ಟ ವಿಷಯಗಳಲ್ಲಿ ಉದಾರ ಮನೋಭಾವವನ್ನು ತಾಳಬೇಕು.

ನೀವು ಯಾವ ಮೌಲ್ಯಗಳನ್ನು ಜೀವನದಲ್ಲಿ ಬಹು ಮುಖ್ಯವೆಂದು ಭಾವಿಸಿ ಅದರಂತೆ ನಡೆದುಕೊಳ್ಳುತ್ತೀರೋ, ಅವುಗಳ ಸಮಗ್ರ ಅರಿವನ್ನು ನಿಮ್ಮ ಮಗುವು ಕೂಡ ಪಡೆಯುವುದು ಅತ್ಯಂತ ಅವಶ್ಯಕ. ಪರಿಸರದ ಕಲುಷತೆ, ಇತರರಿಗೆ ಮೋಸ ಮಾಡುವುದು, ಕಾನೂನಿಂದ ತಪ್ಪಿಸಿಕೊಳ್ಳುವುದು, ಲಂಚ, ವರದಕ್ಷಿಣೆ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ದೃಢವಾದ ಮನೋಭಾವವನ್ನು ಹೊಂದುವುದು ಒಳ್ಳೆಯದು. ಆಗ ಮಗುವು ನಿಮ್ಮ ಅಭಿಪ್ರಾಯಗಳಿಗೆ ಬಹಳ ಬೆಲೆಯನ್ನು ಕೊಡುತ್ತದೆ. ಆದ್ದರಿಂದ ಅದು ನಿಮ್ಮ ಮೌಲ್ಯಗಳೊಡನೆ, ತಾನೇತಾನಾಗಿ ತಾದಾತ್ಮ್ಯ ಹೊಂದುತ್ತದೆ.

(ಕೃಪೆ: *Parents and Teachers in Value Education*,
Pub: Ramakrishna Mission, Belur Math) (ಬರಹ: ಸಂ.)

### ಚಿಂತನಪ್ರಭ
### ಸೇವೆ

ಪ್ರತಿಯೊಬ್ಬ ಸ್ತ್ರೀಪುರುಷರನ್ನೂ ದೇವರಂತೆ ನೋಡಿ. ನೀವು ಯಾರಿಗೂ ಸಹಾಯ ಮಾಡಲಾರಿರಿ. ಬೇಕಾದರೆ, ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು; ಆತನನ್ನು ಪೂಜಿಸಬಹುದು. ಭಗವಂತನು ತನ್ನ ಮಕ್ಕಳ ಸೇವೆಗೆ ನಿಮಗೆ ಅವಕಾಶ ಒದಗಿಸಿಕೊಟ್ಟರೆ ನೀವೇ ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನವಿಲ್ಲವೆಂದು ಭಾವಿಸಬೇಡಿ. ಈ ಸದವಕಾಶ ಇತರರಿಗೆ ದೊರೆಯದೇ ಇರುವಾಗ ನಿಮಗೆ ದೊರೆತುದಕ್ಕೆ ನೀವೇ ಧನ್ಯರು. ಅದನ್ನು ಒಂದು ಪೂಜೆಯಂತೆ ಮಾಡಿ. ನಾವು ಬಡವನಲ್ಲಿ ದೇವರನ್ನು ನೋಡಬೇಕು. ನಮ್ಮ ಮುಕ್ತಿಗಾಗಿ ನಾವು ಅವರ ಪೂಜೆ ಮಾಡಬೇಕು. ದೀನರು, ದುಃಖಿಗಳು ನಮ್ಮ ಮೋಕ್ಷಕ್ಕಾಗಿಯೇ ಇರುವರು. ರೋಗಿಯಂತೆ, ಹುಚ್ಚನಂತೆ, ಕುಷ್ಠನಂತೆ, ಪಾಪಿಯಂತೆ ದೇವರು ಬರುವನು. ಇವು ನನ್ನ ಕೆಚ್ಚಿನ ನುಡಿಗಳು. ಭಗವಂತನನ್ನು ಹಲವು ರೂಪಗಳಲ್ಲಿ ಪೂಜಿಸುವುದಕ್ಕೆ ನನಗೆ ಅವಕಾಶ ದೊರಕಿರುವುದು ನನ್ನ ಮಹಾಪುಣ್ಯವೆಂದು ಸಾರುತ್ತೇನೆ. ಮತ್ತೊಬ್ಬರನ್ನು ಆಳುವುದರಿಂದ ಅವರಿಗೆ ಒಳ್ಳೆಯದನ್ನು ಮಾಡುತ್ತೇವೆ ಎಂಬ ಭಾವನೆಯನ್ನು ತೊರೆಯಿರಿ. ಗಿಡಕ್ಕೆ ಬೆಳೆಯಲು ಸಹಾಯ ಮಾಡಿದಂತೆ ಮಾತ್ರ ನಾವು ಮಾಡಬಹುದು. ಬೀಜದ ಬೆಳವಣಿಗೆಗೆ ಸಾಮಗ್ರಿ ಒದಗಿಸಬಹುದು. ಮಣ್ಣು, ನೀರು, ಗಾಳಿ ಗೊಬ್ಬರಗಳನ್ನು ಕೊಡಬಹುದು. ಬೀಜ ಮಾತ್ರ, ತನ್ನ ಸ್ವಭಾವಕ್ಕೆ ಅನುಗುಣವಾಗಿ ತನಗೆ ಬೇಕಾದುದನ್ನು ಹೀರಿ ಜೀರ್ಣಿಸಿಕೊಂಡು ತನ್ನ ನಿಯಮದಂತೆ ಬೆಳೆಯುವುದು. – **ಸ್ವಾಮಿ ವಿವೇಕಾನಂದ**